ಮಾಡಿ ಅರ್ಧಭಾಗ ರೊಕ್ಕ ತಂದು ಕೊಟ್ಟು "ಇವತ್ತಿಗೆ ನಿಮಪ್ಪ ಸಂಪಾದಿಸಿದ ರೊಕ್ಕ ಮುಗೀತಪ್ಪ ತಗಾ" ಅಂದಳು. ಇಷ್ಟಾದರೂ ಅವ್ವ ನೂರಾರು ಕಟ್ಟುಗಳನ್ನು ಗುಟ್ಟಾಗಿ ಇಟ್ಟುಕೊಂಡು "ಹೂಂ ರೊಕ್ಕ ಇದ್ರೆ ಇವತ್ತಲ್ಲ ನಾಳೆ ಯಾರಾದ್ರು ಸಾಕತಾರ" ಅಂತ ಸುಮ್ಮನೆ ಗಂಡನ್ನ ನೆನಪು ಬಂದಂತಾಗಿ ನಾನು ಉಂಬಾಕಲ್ಲಪ್ಪ ಅಂತೇಳಿ ಮಲಗಿದಳು.

ಬಸಮ್ಮವ್ವನ ಪೆಟಾರಿ ಖಾಲಿಯಾಯಿತೆಂದು ಕೆಲವು ತಿಂಗಳಾದ ಮೇಲೆ ಮಕ್ಕಳು ಊಟವನ್ನು ಕಕ್ಕುಲಾತಿ ಮಾಡಿ ಕೊಡಲಿಲ್ಲ. ಮಕ್ಳು ಸುಕವಾಗಿರ್ಲಿ. ರೊಕ್ಕದ ಕೊಳ್ಳಿದೆವ್ವ ಬಡದೈತೆ ಇವಕ್ಕ. ಏಟು ಕೊಟ್ರೂ ನೋಡೋದಿಲ್ಲ. ಯಾಕ ಇವ್ರಗೆ ನನ್ನಿಂದ ಕಷ್ಟ. ನಾನೇ ಮನೆಬುಟ್ರೆ ಅವ್ರನ್ನ ಸುಕವಾಗಿರ್ಲಿ. ನಂದೇನು ಇವತ್ತಿದ್ದು ನಾಳೆ ಬಿದ್ದೋಗೋ ಮರ. ಯೆಂಗೋ ಆತ ಸಂಪಾದಿಸಿದ ಇನ್ನು ರವ್ವಟು ರೊಕ್ಕ ಐದಾವ. ಯಾರಿಗನ್ನ ಕೊಟ್ರೆ ಮುದ್ದೆ ಬಾನ ಆಕದಲ್ಲೇನು" ಎಂದು ಗಟ್ಟಿ ಧೈರ್ಯಮಾಡಿ ಪೆಟಾರಿ ತೆಗೆದುಕೊಂಡು ಇಬ್ಬರೂ ಮಕ್ಕಳು ಬರೋದ್ರೊಳಗೆ ಮನೆ ಬಿಟ್ಟು, ಅವ್ವ ಇನ್ನೊಂದು ಹಳೇ ಮನಿಗೆ ಹೋಗಿ ಕುಂತಳು. ಹೊಟ್ಟೆ ಹಸಿದಂತಾಗಿ ಸ್ವಲ್ಪ ಚಕ್ರಬಂತು. ಪೆಟಾರಿ ಮೂಲ್ಯಾಗಿಟ್ಟು, ಒಂದು ಜಾಮು ನೀರು ಕುಡಿದಳು. ರಾತ್ರಿಯಿಂದ ಒಂದು ಮುದ್ದೆ ಉಂಡಿಲ್ಲ ಎಂದು ಪೆಟಾರಿ ತೆಗೆದು ಐದುನೂರ ರೂಪಾಯಿ ತೆಗೆದಳು. ಅವ್ವನಿಗೆ ತುಂಬಾ ಆಪ್ತವಾಗಿದ್ದ ಸಣ್ಣ–ಅಂಜಿನಿ ದುರುಗ ಯಾರಿಗನ್ನ ಕೊಟ್ರೆ ಉಂಬಾಕ ತಂದ್ ಕೊಡತಾರ. ಮನಸ್ಸಿನೊಳಗೆ ಅವ್ವ ಯೋಚಿಸಿದಳು. ಮಕ್ಕಳ ಮದಿವ್ಯಾದ ಮೇಲೆ ಇರ್‍ಯಾರು ಮನೆಯಲ್ಲಿ ಇರಲಿಲ್ಲ. ಆದರೂ ಅವ್ವ ದುರುಗನನ್ನು ಕರೆದು ಐನೂರು ಕೊಟ್ಟು " ಸೊಲುಪು ಅಡಿಗೆ ಸಾಮಾನು ತಾಂಬಾರಲೊ" ಅಂದಳು. ದುರುಗ ಕೊಕ್ಕಾಯಿಸಿ ನಕ್ಕ. 'ಯಮ್ಮಂಗೆ ಈ ರೊಕ್ಕ ಎದುಕ್ಕೂ ಬರಂಗಿಲ್ಲಂಗೇ' ಅಂದವನೇ ನೋಟನ್ನು ಅಲ್ಲೆ ಬಿಸಾಕಿ ಓಡಿಹೋದ. ಬಸಮ್ಮವ್ವ ಒಳಗೊಳಗೇ ನಕ್ಕು 'ಪಾಪ ನಮ್ಮ ದುರುಗ ಯಾವತ್ತೂ ಐನೂರು ರೂಪಾಯಿ ನೋಟು ನೋಡಿದೋನಲ್ಲ ತೊರಗೋನು, ದಡ್ಡ' ಎಂದುಕೊಂಡು ಮನೆ ಬಾಗಿಲು ದಾಟಿ ಮುಂದೆ ಇದ್ದ ಕಟ್ಟೆ ಮೇಲೆ ಕುಂತಳು. ಚೆನ್ನಾಗಿ ಓದಿಕೊಂಡಿದ್ದ 'ರಾಮೇಶಿ ಏನವ್ವಾ ಅರಾಮಿದೀಯಾ' ಎನ್ನುತ್ತಿದ್ದಾಗಲೇ, 'ಬಾ ತಮ್ಮ ಬಾ ಇಗಾ ತಗ' ಅಂತ ಸಾವಿರದ ನೋಟು ತೆಗೆದು 'ಸ್ವಲ್ಪ ಉಂಬಾಕ ಏನನ್ನ ತಂದು ಕೊಡಾ ಮೊಮ್ಮಗನೇ ಪುಣ್ಣೇವು ಬರತೈತೆಂತ' ಅವ್ವ ಶಕ್ತಿ ಮೀರಿ ಕೇಳಿದಳು. ಅವ್ವನನ್ನ ನೋಡುತ್ತಾ ಬೆಳೆದ ರಾಮೇಶಿ ಬಸಮ್ಮವ್ವಗ ವಯಸ್ಸಾತು ಅರುವು ಮರವು. ನೋಟು ನಡೆಯೋದಿಲ್ಲಂತ ತಿಳಿದಂಗಿಲ್ಲ ಅನಕೊಂಡ, ಯವ್ವಾ ನಾನು ಇಡ್ಲಿಗಿಡ್ಲಿ ಕಟ್ಟಿಸಿಗೆಂಡು ಬರ್ತಿನಿ. ಈ ಸಾವಿರ ನಿನ್ನ ಕಡೆ ಇರಲಿ ಅಂತ ಹೆಜ್ಜೆ ಹಾಕಿದ. ಹೋದವನು ಬರಲೇ ಇಲ್ಲ.

ಬಸಮ್ಮವ್ವನ ಕರುಳು ಅನ್ನ ಇಲ್ಲದೆ ಡಿರಿಕಿ ಹಾಕುತ್ತಿತ್ತು. ಮನೆತುಂಬ ಆಳುಕಾಳುಗಳಿಗೆ ಉಗುರಿನಷ್ಟು ಮತ್ಸರವಿಲ್ಲದೇ ಹೊಟ್ಟೆತುಂಬ ಊಟಹಾಕಿ ಮಕ್ಕಳಂತೆ ಕಾಣುತ್ತಿದ್ದ ನೆನಪು ಕಣ್ಣಂಚಿಗೆ ಬಂದು ಹೋಯಿತು. ಊರಿಗೆ ಬೇವೂರವರು ಯಾರು ಬಂದರೂ ಅವ್ವನ ಮನೆ ನೋಡಿ, ಊಟ ಮಾಡಿಕೊಂಡೇ ಹೋಗುತ್ತಿದ್ದವರು ಕಣ್ಣಿಗೆ ಕಟ್ಟಿದಂಗಾದರು. ತಲೆ ಮತ್ತಷ್ಟು ಬವಳಿ ಬಂತು. ಕೈಯಲ್ಲಿದ್ದ ಅನ್ನದ ಮುದ್ದೆ ಜಾರಿ ಬಿದ್ದಾಂಗಾತು. ಅವ್ವ ಪೆಟಾರಿಯನ್ನು ಮೆಲ್ಲಗೆ ಕೈಯಲ್ಲಿ ಹಿಡಿದು ಎತ್ತಿದಳು. ಅಲುಗಾಡಲಿಲ್ಲ. ಪಾದದಿಂದ ನೆತ್ತಿವರಿಗಿನ ಶಕ್ತಿಯನ್ನೆಲ್ಲಾ ಒಂದು ಮಾಡಿ ಪೆಟಾರಿಯನ್ನು ಓಬಳರಾಯನ ಗುಡಿ ಕಡೆಗೆ ತಂದಳು. ಬೀಗದ ಕೈ ತೆರೆದು ಅದರೊಳಗೆ ಇಟ್ಟಿದ್ದ, ಐನೂರು, ಸಾವಿರ ರೂಪಾಯಿಯ ಕಟ್ಟುಗಳನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ಕೂಗಿದಳು. "ರ್‍ರೆಲೋ ತರ್‍ರಿ, ರೊಕ್ಕ ತರ್‍ರಿ ಒಂದ್ ತುತ್ತು ಅನ್ನ ಹಾಕರಿ. ರ್‍ರೆಪೇ ಏಟು ಬೇಕು ಆಟು ರೊಕ್ಕ ತರ್‍ರಿ. ಐನೂರು, ಸಾವ್ರ ಹೊಸಾ ನೋಟು, ನನಿಗೆ ಅನ್ನಕೊಡರಿ, ತಲೆತಿರುಗುತ್ತೈತೆ ಜಲ್ದಿ ರ್‍ರಿ" ಎಂದು ಕಂಡ್‌ಕಂಡವರನ್ನ ಕರದು ನೋಟುಗಳನ್ನು ತೋರಿಸಿ ಕೊಡಲು ಹೋದಳು. ಜನ ನೋಡಿ 'ಅವ್ವಗ ಮೆಂಟಲ್ ಬಂದೈತೆ ನಡಿರಿ ನಡಿರಿ' ಅಂತ ಮುಂದೆ ಹೋದರು. ಮತ್ತೆ ಕೆಲವರು ನೋಟು ನಡೆಯೋದಿಲ್ಲಂಗೆ ಅಂದರು. ಅವ್ವ 'ತರ್‍ರೆಲೋ ಐನೂರು, ಸಾವ್ರ ಹೊಸ ನೋಟುಗಳಪ್ಪೊ ತರ್‍ರಿ' ಎಂದು ಕುಸೇಕುಂತು ಕೂಗುತ್ತಿದ್ದಳು.

●